ಆ. ಎಲ್ಲಾ ಘಟಕಗಳಿಗೆ ಸಹಾಯಧನ ನೀಡಿಲ್ಲ ಅರ್ಹವಾದ 324 ಘಟಕಗಳಿಗೆ ರೂ. 555.06 ಲಕ್ಷ ಸಹಾಯಧನ ಮಂಜೂರು ಮಾಡಿದೆ.

ಇ. ದಿನಾಂಕ: 31.3.2002 ರವರೆಗೆ 130 ಘಟಕಗಳಿಗೆ ರೂ. 307.66 ಲಕ್ಷ ಬಿಡುಗಡೆಗೆ ಬಾಕಿ ಇದೆ.

ಈ. ಮಿತಿಗೊಳಿಸಿ ಆಯವ್ಯಯದಲ್ಲಿ ಹಣವನ್ನು ಒದಗಿಸಲಾಗಿದೆ.

ಉ. ಸಹಾಯಧನ ಮಂಜೂರಾತಿ ದಿನಾಂಕವನ್ನು ಆಧಾರವಾಗಿಟ್ಟುಕೊಂಡು ಜೇಷ್ಟತೆ ಆಧಾರದ ಮೇಲೆ ಸಹಾಯಧನವನ್ನು ಬಿಡುಗಡೆ ಮಾಡಲಾಗುತ್ತಿದೆ.

ಊ. ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾದ ಹಣದ ವಿವಗಳು:

1999-2000	- 19 ಘಟಗಳಿಗೆ	- 38.85 ಲಕ್ಷಗಳು
2000-2001	- 30 ಘಟಕಗಳಿಗೆ	- 33.13 ಲಕ್ಷಗಳು
2001-2002	- 17 ಘಟಕಗಳಿಗೆ	- 18.89 ಲಕ್ಷಗಳು

ರಾಜ್ಯದಲ್ಲಿ ಮೀನುಗಾರರ ಅಭಿವೃದ್ಧಿಗಾಗಿ ಯೋಜನೆಗಳು

92(128): ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ರಾಜ್ಯ ಸರ್ಕಾರವು ಮೀನುಗಾರರ ಅಭಿವೃದ್ಧಿಗಾಗಿ ತೆಗೆದುಕೊಂಡಿರುವ ಯೋಜನೆಗಳೇನು?

ಆ. ಸದರಿ ಯೋಜನೆಗಳಿಂದ ಮೀನುಗಾರರಿಗೆ ಸಿಗುತ್ತಿರುವ ಸೌಲಭ್ಯಗಳೇನು. ಸರ್ಕಾರ ನೀಡುತ್ತಿರುವ ಹಣಕಾಸಿನ ನೆರವು ಎಷ್ಟು?

ಇ. ಮುರಾರಿ ಸಮಿತಿಯ ಶಿಫಾರಸ್ಸುಗಳನ್ನು ಕೇಂದ್ರ ಒಪ್ಪಿಕೊಂಡಿರುವಂತೆ ರಾಜ್ಯವು ಅನುಷ್ಠಾನಕ್ಕೆ ತರುವುದೇ?

ಈ. ಇವುಗಳನ್ನು ಕಾರ್ಯಾನುಚರಣೆಗೆ ತರಲು ಸರ್ಕಾರಕ್ಕಿರುವ ತೊಂದರೆಗಳೇನು?

ಉ. ಮೀನುಗಾರರ ಬೇಡಿಕೆಗಳೇನು? ಇವುಗಳ ಈಡೇರಿಕೆಗೆ ಸರ್ಕಾರ ಸ್ಪಂದಿಸಿದೆಯೇ?

ಊ. ಸಮುದ್ರ ಮೀನುಗಾರಿಕೆಯನ್ನು ಆ ಭಾಗದ ಸಂಪ್ರದಾಯಿಕ ಮೀನು ಕೃಷಿಕರಿಗೆ ನೀಡಬೇಕು, ವಿದೇಶಿ ಮೀನುಗಾರಿಕೆಗೆ ಅವಕಾಶ ನೀಡಬಾರದೆಂಬ ವಿಚಾರದ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ವಸಂತ್ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು)

ಅ. ಅನುಬಂಧ - 1ರಲ್ಲಿ ವಿವರಗಳನ್ನು ನೀಡಿದೆ.

ಆ. ಅನುಬಂಧ - 2ರಲ್ಲಿ ವಿವರಗಳನ್ನು ನೀಡಿದೆ.

ಇ. ಭಾರತ ಸರ್ಕಾರವು ರಚಿಸಿದ್ದ ಮುರಾರಿ ಸಮಿತಿಯು ಆಳ ಸಮುದ್ರದ ಮೀನುಗಾರಿಕೆಗೆ ಸಂಬಂಧಿಸಿದ ವರದಿಯನ್ನು ಸಲ್ಲಿಸಿರುತ್ತದೆ.ಈ ಬಗೆಗೆ ಲಭ್ಯವಿರುವ ಮಾಹಿತಿ ಪ್ರಕಾರ ಭಾರತ ಸರ್ಕಾರವು ತನ್ನ ನೀತಿಯನ್ನು ಇನ್ನೂ ರೂಪಿಸಬೇಕಾಗಿರುತ್ತದೆ.

ಈ. ಈ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರುವ ಪ್ರಾಧಿಕಾರವು ಭಾರತ ಸರ್ಕಾರ ಆಗಿರುತ್ತದೆ.

ಉ. ಮೀನುಗಾರರಿಂದ ಹಲವಾರು ಅಹವಾಲುಗಳು ಇರುತ್ತದೆ. ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದ ಅಹವಾಲುಗಳನ್ನು ಅನುಷ್ಠಾನಗೊಳಿಸಲು ಕ್ರಮ ಜರುಗಿಸಲಾಗುತ್ತಿದೆ. ಉದಾಹರಣೆಗಾಗಿ:

1. ಮೀನುಗಾರಿಕೆಯ ದೋಣಿಗಳು ಉಪಯೋಗಿಸಲಾಗುವ ಡೀಸೆಲ್ ಇಂಧನದ ಮೇಲಿನ ಮಾರಾಟ ತೆರಿಗೆಯನ್ನು 50,000 ಕಿ.ಲೋ. ಗಳವರೆಗೆ ವಿನಾಯಿತಿ ನೀಡಲಾಗಿದೆ.

2. "ಮತ್ಸ್ಯ ಆಶ್ರಯ" ಯೋಜನೆಯಡಿ ಗೃಹರಹಿತ ಮೀನುಗಾರರಿಗೆ ಗೃಹಗಳನ್ನು ಹಂತ ಹಂತವಾಗಿ ನೀಡಲಾಗುತ್ತಿದೆ. ಇತ್ಯಾದಿ.

ಊ. ವಿದೇಶಿ ದೋಣಿಗಳ ಮೀನುಗಾರಿಕೆಯ ಚಟುವಟಿಕೆಗೆ ಅನುಮತಿ ನೀಡುವ ಅಧಿಕಾರ ಭಾರತ ಸರ್ಕಾರಕ್ಕೆ ಇರುತ್ತದೆ.

ವಿಧಾನ ಸಭಾ ಚಚರಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 128ಕ್ಕೆ ಅನುಬಂಧ - 2

ಒಳನಾಡು ಪ್ರದೇಶಗಳಲ್ಲಿ ಮೀನು ಕೃಷಿ ಕೊಳ ನಿರ್ಮಾಣಕ್ಕೆ ಸಹಾಯಧನ ಸಲಕರಣೆಗಳನ್ನು ಕೊಳ್ಳಲು ಸಹಾಯಧನ, ಕೆರೆ, ಕೊಳಗಳಲ್ಲಿ, ಸಿಹಿ ನೀರು ಮೀನು ಮತ್ತು ಸಿಗಡಿ ವ್ಯವಸಾಯಕ್ಕೆ ಪ್ರೋತ್ಸಾಹ ಬಾವಿ ಹೊಂಡಗಳಲ್ಲಿ ಮೀನು ಕೃಷಿಗೆ ಸಹಾಯಧನವನ್ನು ನೀಡಲಾಗುತ್ತಿದೆ. ಜಾಗು ಮತ್ತು ಚೌಳು ಪ್ರದೇಶಗಳಲ್ಲಿ ಮೀನು ಕೃಷಿ ಕೈಗೊಳ್ಳಲು ಕೊಳ ನಿರ್ಮಾಣಕ್ಕೆ ಪ್ರತಿ ಎಕರೆಗೆ ರೂ. 30,00 ಸಹಾಯಧನ ನೀಡಲಾಗುತ್ತಿದೆ. ಮೀನು ಮಾರಾಟಕ್ಕೆ ಮೀನುಗಾರರಿಗೆ ಬೈಸಿಕಲ್ ಮತ್ತು ಶಾಖ ನಿರೋಧ ಪೆಟ್ಟಿಗೆಗಳನ್ನು ಒದಗಿಸಲು ರೂ. 1250.00 ಸಹಾಯಧನ ನೀಡಲಾಗುತ್ತಿದೆ ಮೀನುಗಾರರಿಗೆ ಕ್ಷೇಮಾಭಿವೃದ್ಧಿ ನಿಧಿಯಡಿ ಮಾದರಿ ಗ್ರಾಮಗಳ ನಿರ್ಮಾಣ ಯೋಜನೆಯಡಿ ನಿರ್ವಸತಿ ಮೀನುಗಾರರಿಗೆ ವಸತಿ ಸೌಲಭ್ಯ, ಕುಡುಯುವ ನೀರು, ಸಮುದಾಯ ಭವನ ಮುಂತಾದ ಸೌಲಭ್ಯಗಳನ್ನು ಒದಗಿಸಲು ಅವಕಾಶವಿದ್ದು, ವಸತಿ ನಿರ್ಮಾಣಕ್ಕಾಗಿ ಪ್ರತಿ ಫಲಾನುಭವಿಗಳಿಗೆ ರೂ. 30,000-00 ದಿಂದ ರೂ. 35,000-00ಗಳಿಗೆ ಮೊರದಂತೆ ಮನೆಯನ್ನು ಶೇಕಡ 50 ರಷ್ಟು ಕೇಂದ್ರ ಸರ್ಕಾರದ ನೆರವಿನೊಂದಿಗೆ ನಿರ್ಮಾಣ ಮಾಡಿ ಕೊಡಲಾಗುತ್ತಿದೆ.

"ಮತ್ಸ್ಯ ಆಶ್ರಯ" ಎರಡನೇ ಹಂತದಲ್ಲಿ ಹುಡ್ಕೋ ಸಂಸ್ಥೆ ಸಾಲದ ನೆರವು ರೂ. 12.50 ಕೋಟಿ ಮತ್ತು ರಾಜ್ಯದ ಪಾಲು ರೂ. 2.50 ಕೋಟಿಗಳ ವೆಚ್ಚದಲ್ಲಿ ಮೀನುಗಾರರಿಗೆ 5000 ಮನೆಗಳ ನಿರ್ಮಾಣವನ್ನು ತೆಗೆದುಕೊಳ್ಳಲಾಗಿದೆ.

ಕರಾವಳಿ ಪ್ರದೇಶಗಳಲ್ಲಿ ಮೀನುಗಾರರಿಗೆ ಸರ್ಕಾರವು ಈ ಕೆಳಕಂಡ ಸೌಲಭ್ಯಗಳನ್ನು ಹಾಗೂ ಹಣಕಾಸಿನ ನೆರವನ್ನು ನೀಡುತ್ತಿದೆ. ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ಸಾಂಪ್ರದಾಯಿಕ ದೋಣಿಳಲ್ಲಿ ಮೀನು ಹಿಡಿಯಲು ಸಹಾಯವಾಗುವಂತೆ ಈ ದೋಣಿಗಳಿಗೆ ಔಟ್ ಬೋರ್ಡ್

ಮತ್ತು ಇನ್ ಬೋರ್ಡ್ ಎಂಜಿನ ಅಳವಡಿಸಲು ಕ್ರಮವಾಗಿ ರೂ. 1000 ಮತ್ತು ರೂ. 12000 ಗಳ ಸಹಾಯಧನ ನೀಡಲಾಗುತ್ತಿದೆ. ದೂರ ತೀರದ ಮೀನುಗಾರಿಕೆ ದೋಣಿಗಳಿಗೆ ಮೀನುಗಳ ಇರುವಿಕೆಯನ್ನು ಕಂಡು ಹಿಡಿಯಲು ಬೇಕಾಗುವ ಜಿ.ಪಿ.ಎಸ್. ನ್ಯಾವಿಗೇಟರ್, ಫಿಶ್ ಫೈಂಡರ್ ಮತ್ತು ರೇಡಿಯೋ ಟೆಲಿಫೋನ್ ಖರೀದಿ ಅಳವಡಿಸಲು ಶೇ. 25 ರಷ್ಟು ಗರಿಷ್ಟ ರೂ. 34,000-00 ಸಹಾಯ ಧನವನ್ನು ನೀಡಲಾಗುತ್ತಿದೆ. ಕೇಂದ್ರ ಪುರಸ್ಕೃತ ಮೀನುಗಾರರ ಸಾಮೂಹಿಕ ಅಪಘಾತ ವಿಮಾ ಯೋಜನೆಯಡಿ ವಿಮಾ ಕಂತಿನ ಹಣ ತಲಾ ರೂ. 14.00ಗಳನ್ನು ಕೇಂದ್ರ ಮತ್ತು ರಾಜ್ಯಸರ್ಕಾರಗಳು 50:50 ರಂತೆ ಪ್ರತಿ ವರ್ಷ ದೆಹಲಿಯಲ್ಲಿರುವ ರಾಷ್ಟ್ರೀಯ ಮೀನುಗಾರರ ಸಹಕಾರಿ ಮಂಡಳಿಗೆ ಪಾವತಿ ಮಾಡಿ 60,000 ಮೀನುಗಾರರಿಗೆ ವಿಮೆ ಒದಗಿಸಲಾಗಿದೆ. ಈ ಯೋಜನೆಯಂತೆ ಮರಣ ಹೊಂದಿದ ಮೀನುಗಾರರ ಕುಟುಂಬದವರಿಗೆ ಹಾಗೂ ಶಾಶ್ವತ ಅಂಗವಿಕಲರಾದವರಿಗೆ ರೂ. 50,000-00 ಹಾಗೂ ಭಾಗಶಃ ಅಂಗವಿಕಲರಾದವರಿಗೆ ರೂ. 25,000ಗಳ ಪರಿಹಾರ ನೀಡಲಾಗುವುದು. ಕೇಂದ್ರ ಪುರಸ್ಕೃತ ಯೋಜನೆ ಕರಾವಳಿ ಮೀನುಗಾರರಿಗೆ ಉಳಿತಾಯ ಮತ್ತು ಪರಿಹಾರ ಯೋಜನೆಯಡಿಯಲ್ಲಿ ಎಂಟು ತಿಂಗಳ ಮೀನುಗಾರರಿಗೆ ಅವಧಿಯಲ್ಲಿ ಕರಾವಳಿ ಮೀನುಗಾರರಿಗೆ ಮಾಸಿಕ ರೂ. 75.00 ವಂತಿಕೆ ವಸೂಲಿ ಮಾಡಿ ಈ ಮೊತ್ತಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಶೇಕಡ 50 ರಷ್ಟು ಸಮಪಾಲನ್ನು ನೀಡಿ ಮೀನುಗಾರಿಕೆ ಇಲ್ಲದ ನಾಲ್ಕು ತಿಂಗಳಲ್ಲಿ ತಲಾ ರೂ. 300-00 ಗಳನ್ನು ನೀಡಲಾಗುವುದು. ಮತ್ಸ್ಯ ವಾಹಿನಿ ಯೋಜನೆಯಡಿ ಮೀನು ಇಳಿದಾ ಕೇಂದ್ರಗಳಿಂದ ಮೀನು ಮಾರಾಟ ಸ್ಥಳಗಳಿಗೆ ಹಿಡಿದ ಮೀನನ್ನು ತಾಜಾ ಸ್ಥಿತಿಯಲ್ಲಿ ತ್ವರಿತವಾಗಿ ಸಾಗಿಸಲು 3 ಅಥವಾ 4 ಮೀನುಗಾರರ ಗುಂಪುಗಳಿಗೆ ತ್ರಿಚಕ್ರ ಟೆಂಪೋ ರಿಕ್ಷಾ ಖರೀದಿಸಲು ರೂ. 25,000ಗಳ ಸಹಾಯಧನ ನೀಡಲಾಗುವುದು. ಕರಾವಳಿ ಜಿಲ್ಲೆಗಳ ಮೀನುಗಾರರ ಸಹಕಾರ ಸಂಘಗಳ ಸದಸ್ಯರುಗಳ ಮೀನುಗಾರಿಕೆ ಸಲಕರಣೆಗಳನ್ನು ಖರೀದಿಸಲು 1/3ರಷ್ಟು ಸಹಾಯಧನವನ್ನು ಪಡೆಯಲು ಅರ್ಹರಾಗಿರುತ್ತಾರೆ. ಸಾಲವನ್ನು ವೈಯಕ್ತಿಕ ಮೀನುಗಾರರಿಗೆ ರೂ. 3000ಗಳು ಇಬ್ಬರಿಗಿಂತ ಹೆಚ್ಚು ಮೀನುಗಾರರ ಗುಂಪಿಗೆ ರೂ. 5000ಗಳಿಗೆ ಮಿತಿಗೊಳಿಸಲಾಗಿದೆ.

ಮೀನು ಸಾಕಾಣಿಕೆ ಕೊಳ ನಿರ್ಮಾಣಕ್ಕೆ ಆಸಕ್ತಿ ವ್ಯಕ್ತಿಗಳು ತಮ್ಮ ಸ್ವಂತ ಜಮೀನಿನಲ್ಲಿ ಒಂದು ಎಕರೆ ವಿಸ್ತೀರ್ಣದ ಮೀನು ಸಾಕಾಣಿಕೆ ಕೊಳ ನಿರ್ಮಾಣ ಮಾಡಿದಲ್ಲಿ ಅವರಿಗೆ ಬಂಡವಾಳ ವೆಚ್ಚದ ಶೇಕಡ 25 ರಷ್ಟು ಸಹಾಯಧನವನ್ನು ರೂ. 10000 ಗಳಿಗೆ ಮಿತಗೊಳಪಟ್ಟು ನೀಡಲಾಗುವುದು. ಹುಲ್ಲುಗೆಂಡೆ ಮೀನುಮರಿ ಸರಬರಾಜು ಯೋಜನೆಯಡಿ ಉದ್ದಿಮೆದಾರರಿಗೆ ಮೀನುಗಾರಿಕೆ ಸಹಕಾರ ಸಂಘಗಳಿಗೆ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಹುಲ್ಲುಗೆಂಡೆ ಮೀನುಮರಿಯನ್ನು ಸರಬರಾಜು ಮಾಡಿ ಅದನ್ನು ನೀರಿನ ಕಳೆ ಹಾಗೂ ಹುಲ್ಲಿನಿಂದ ಆವೃತ್ತವಾಗಿರುವ ಕೆರೆಗಳಿಗೆ ಬಿತ್ತನೆ ಮಾಡಲು ಅವಕಾಶ ಒದಗಿಸಲಾಗಿದೆ. ರಾಜ್ಯದಲ್ಲಿನ ಸಣ್ಣ ಕೆರೆ ಕೊಳಗಳಲ್ಲಿ ವೈಜ್ಞಾನಿಕ ರೀತಿಯಲ್ಲಿ ಮೀನುಕೃಷಿಯನ್ನು ಪ್ರೋತ್ಸಾಹಿಸಲು 13 ಜಿಲ್ಲೆಗಳಲ್ಲಿ ಕೇಂದ್ರ ಸರ್ಕಾರದ ನೆರವಿನೊಂದಿಗೆ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳನ್ನು ಸ್ಥಾಪಿಸಲಾಗಿದ್ದು ಈ ಸಂಸ್ಥೆಗಳು ಗ್ರಾಮೀಣ ನಿರುದ್ಯೋಗಿ ಯುವಕರಿಗೆ ಒಳನಾಡು ಮೀನುಗಾರಿಕೆಯಲ್ಲಿ ತರಬೇತಿ ನೀಡುವ ಜೊತೆಗೆ ಸೂಕ್ತ ಸಣ್ಣ ಕೆರೆಗಳ ಪಾಶುವಾರು ಹಕ್ಕನ್ನು ಫಲಾನುಭವಿಗಳಿಗೆ ಗುತ್ತಿಗೆ ನೀಡಿ ಮೀನುಮರಿ ಆಹಾರ, ಗೊಬ್ಬರ

ಮುಂತಾದ ವಸ್ತುಗಳನ್ನು ಹಾಗೂ ಮೀನು ಹಿಡಿಯಲು ಸಲಕರಣೆಗಳನ್ನು ಖರೀದಿಸಲು ಸಹಾಯಧನವನ್ನು ಒದಗಿಸುತ್ತದೆ.

ವಿಧಾನ ಸಭಾ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 128ಕ್ಕೆ ಅನುಬಂಧ -1

ರಾಜ್ಯ ಸರ್ಕಾರವು ಮೀನುಗಾರರ ಅಭಿವೃದ್ಧಿಗಾಗಿ ಈ ಕೆಳಕಂಡ ಯೋಜನೆಗಳನ್ನು ತೆಗೆದುಕೊಳ್ಳಲಾಗಿದೆ.

ರಾಜ್ಯವಲಯ ಯೋಜನೆಗಳು:-

1. ಮೀನುಮರಿ ಉತ್ಪಾದನೆ, ಸಾಕಾಣೆ ಮತ್ತು ಹಂಚಿಕೆ.
2. ಜಲಾಶಯ ಮತ್ತು ಕೆರೆ ಮೀನುಗಾರಿಕೆಯ ಅಭಿವೃದ್ಧಿ ಪೂರ್ಣೋಪಯೋಗ.
3. ಮೀನು ಕೊಳಗಳ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದು.
4. ಅಚ್ಚುಕಟ್ಟು ಪ್ರಾಧಿಕಾರಗಳ ಜೌಗು:ಚೌಳು ಪ್ರದೇಶಗಳಲ್ಲಿ ಮೀನು ಕೃಷಿಕೊಳಗಳ ನಿರ್ಮಾಣ
5. ಒಳನಾಡು ಮೀನುಗಾರಿಕೆ ಯೋಜನೆ ಎನ್.ಸಿ.ಡಿ.ಸಿ ಸಹಾಯ.
6. ಸಾಂಪ್ರಾದಾಯಿಕ ದೋಣಿಗಳನ್ನು ಯಾಂತ್ರೀಕರಿಸುವ ಕೇಂದ್ರ ಪುರಸ್ಕೃತ ಯೋಜನೆ.
7. ಯಾಂತ್ರೀಕೃತ ಮೀನು ದೋಣಿಗಳು ಬಳಸುವ ಹೆಚ್.ಎಸ್.ಡಿ. ಮೇಲಿನ ಕೇಂದ್ರ ಅಬಕಾರಿ ತೆರಿಗೆಯನ್ನು ಮಾಫಿ ಮಾಡುವುದು.
8. ಮಲ್ಪೆ ಮತ್ತು ಹೊನ್ನಾವರ ಮೀನುಗಾರಿಕೆ ಬಂದರಿನ ನಿರ್ವಹಣೆ
9. ರಾಷ್ಟ್ರೀಯ ಸಹಕಾರಿ ಅಭಿವೃದ್ಧಿ ನಿಗಮದ ನೆರವಿನ ಸಮಗ್ರ ಕರಾವಳಿ ಮೀನುಗಾರಿಕೆ ಅಭಿವೃದ್ಧಿ ಯೋಜನೆ.
10. ಮೀನು ಮಾರಾಟಕ್ಕಾಗಿ ಮೀನುಗಾರರಿಗೆ ಸಹಾಯ
11. ಮತ್ಸ್ಯ ವಾಹಿನಿ
12. ಕೇಂದ್ರ ವಲಯ ಯೋಜನೆ - ಸಮೂಹ ವಿಮಾ ಯೋಜನೆಯಡಿ ಕಾರ್ಯಶೀಲ ಮೀನುಗಾರರಿಗೆ ಸಹಾಯಧನ
13. ಸಮುದ್ರ ಮೀನುಗಾರರಿಗೆ ಉಳಿತಾಯ ಹಾಗೂ ಪರಿಹಾರ ಯೋಜನೆಯ ಕೇಂದ್ರ ಪುರಸ್ಕೃತ ಯೋಜನೆ.
14. ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ - ಒಳನಾಡು ಮೀನುಗಾರಿಕೆಯ ತೀವ್ರ ಅಭಿವೃದ್ಧಿಗಾಗಿ ಸಹಾಯಾನುಧಾನ
15. ಮೀನುಗಾರರ ಕಲ್ಯಾಣ ನಿಧಿಗಾಗಿ ಕೇಂದ್ರ ಪುರಸ್ಕೃತ ಯೋಜನೆ.
16. ದೂರ ತೀರ ಮೀನುಗಾರಿಕೆ ನೌಕೆಗಳಿಗೆ ಮೀನುಗಳನ್ನು ಕಂಡು ಹಿಡಿಯುವ ರೇಡಿಯೋ ಟೆಲಿಫೋನ್ ಮುಂತಾದ ಉಪಕರಣಗಳನ್ನು ಖರೀದಿಸಲು ಸಹಾಯ.

17. ಮೀನುಗಾರರ ಸಂಕಷ್ಟ ಪರಿಹಾರ ನಿಧಿಗೆ ಅಂಶಧಾನ.

18. ಕರಾವಳಿ ಕೂಡು ರಸ್ತೆಗಳ ನಿರ್ವಹಣೆ.

19. ಹೊಳೆತ್ತುವುದು, ಜಲಸಂಚಾರ ಮತ್ತು ಇತರೆ ಕಾಮಗಾರಿಗಳು

20. ಮೀನುಗಾರಿಕೆ ಬಂದರು - ಹೊನ್ನಾವರ, ಮಂಗಳೂರು, ಗಂಗೊಳ್ಳಿ, ಕಾರಾವಾರ.

21. ಮೀನುಗಾರರ ಸಹಕಾರ ಸಂಘಗಳಿಗೆ ಸಾಲಗಳು.

ಜಿಲ್ಲಾ ಪಂಚಾಯತ್ ಯೋಜನೆಗಳು

1. ಸಿಹಿ ನೀರು ಮೀನುಗಳಿಗಾಗಿ ಸಹಾಯಧನ.

2. ಬಾವಿ ಮತ್ತು ಹೊಂಡಗಳಲ್ಲಿ ಮೀನುಗಾರಿಕೆ ಅಭಿವದ್ಧಿಗಾಗಿ ಸಹಾಯ

3. ಮೀನು ಮರಿ ಉತ್ಪಾದನೆ, ಸಾಕಣೆ ಮತ್ತು ಹಂಚಿಕೆ.

4. ಮೀನುಗಾರಿಕೆ ಸಾಮಗ್ರಿಗಳಿಂದಾಗಿ ಸಹಾಯಧನ.

5. ಮೀನು ಕೊಳಗಳ ನಿರ್ಮಾಣಕ್ಕೆ ಸಹಾಯಧನ.

6. ಗ್ರಾಸ್ ಕಾರ್ಡ್ ಮೀನು ಮರಿಗಳ ಸರಬರಾಜಿಗಾಗಿ ಸಹಾಯ.

7. ಸಂಸ್ಕರಣೆ, ಸಂರಕ್ಷಣೆ ಮತ್ತು ಮಾರುಕಟ್ಟೆ.

8. ಮೀನು ಮಾರುಕಟ್ಟೆಗಳ ಪುನರ್ ನಿರ್ಮಾಣಕ್ಕಾಗಿ ಸಹಾಯಧನ.

9. ಮಾರುಕಟ್ಟೆ ಸಂಘಗಳಿಗೆ ಹೂಡುವಳಿಗಳ (ಇನ್‌ಪುಟ್ಸ್) ಖರೀದಿ

10. ಮೀನುಗಾರರ ಅಗತ್ಯ ವಸ್ತುಗಳ ಖರೀದಿಗಾಗಿ ಮೀನುಗಾರಿಕೆ ಸಂಘಗಳಿಗೆ ಸಾಲಗಳು.

ರಾಜ್ಯದಲ್ಲಿ ಸಕ್ಕರೆ ಉತ್ಪಾದನಾ ಪ್ರಮಾಣ

93(223): ಶ್ರೀ ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) ಮಾನ್ಯ ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ. ರಾಜ್ಯದಲ್ಲಿ 2001-20ನೇ ಸಾಲಿನಲ್ಲಿ ಉತ್ಪಾದಿಸಿದ ಸಕ್ಕರೆ ಪ್ರಮಾಣವೆಷ್ಟು?

ಆ. ಉತ್ಪಾದನೆಯಾದ ಸಕ್ಕರೆಗೆ ಮಾರುಕಟ್ಟೆ ದೊರಕದೇ ಸಕ್ಕರೆ ಕಾರ್ಖಾನೆಗಳ ಗೋದಾಮಿನಲ್ಲೇ ಸಕ್ಕರೆಯ ಸ್ಟಾಕ್ ಹೆಚ್ಚಿನ ಪ್ರಮಾದಲ್ಲಿರುವುದನ್ನು ಸರ್ಕಾರ ಗಮನಿಸಿದೆಯೇ?

ಇ. ಹಾಗಿದ್ದಲ್ಲಿ ಸಕ್ಕರೆಗೆ ಮಾರುಕಟ್ಟೆ ದೊರಕಿಸಲು ಸರ್ಕಾರವು ವಿಶೇಷ ಪ್ರಯತ್ನವೇನಾದರೂ ಮಾಡಿದೆಯೇ?

ಈ. ಮಾಡಿದ್ದಲ್ಲಿ ವಿವರಗಳನ್ನು ನೀಡುವುದು